# ಮಳೆಯೊಂದಿಗೆ ಮೊರೆವ ಮನ..



**ಮಳೆಯ ಪಟ್ಲ ಬಿಚ್ಚಿದರೆ ಮುಗಿಯದಷ್ಟು ಕಥೆಗಳು. ಅದೆಷ್ಟು ವರ್ಷ ಸತತವಾಗಿ ಮನದೊಳಗೆ ಸುರಿದಿದೆಯೋ ಎಂಬಂತೆ!**

■ **ಅಲಕಾ ಕಟ್ಟೆಮನೆ**

**ಈ** ಮಳೆಗಾಲವೆಂದರೇ ಹಾಗೆ... ನೆಲದ ಮೇಲೆ ಕಾಲಿಟ್ಟರೆ ಬೆರಳುಗಳ ನಡುವೆ ಒಸರುವ ಒರತೆಯ ಹಾಗೆ ಕೊನೆಯಿಲ್ಲದಷ್ಟು ನೆನಪುಗಳನ್ನು ಉಕ್ಕಿಸುತ್ತವೆ. ಈಗಿನ ಜೀವನಕ್ಕೆ ತಕ್ಕಂತೆ ಮನಸ್ಸೆಷ್ಟೇ ಗಟ್ಟಿ ನೆಲದಂತೆ ಕಂಡರೂ, 'ಧೋ' ಎಂಬ ಮಳೆಯನ್ನು ನೋಡುತ್ತಿದ್ದಂತೆ ಮನದೊಳಗೆಲ್ಲ ಜಲಲ ಜಲಲ ಜಲಧಾರೆ! ಮಳೆಯ ಪಟ್ಲ ಬಿಚ್ಚಿದರೆ ಮುಗಿಯದಷ್ಟು ಕಥೆಗಳು; ಬಿಡಿಸದೆ ಸುಮ್ಮನಿದ್ದರಾಯ್ತು ಎಂದು ಕೂತರೆ, ಕಾಲಡಿಯ ನೆಲವೇ ಜಿನುಗುವಷ್ಟು ಮಳೆಯ ನೆನಪುಗಳ ಮಹಾಪೂರ. ಬರೆದು ನಿವಾರಿಸಿಕೊಳ್ಳುವುದೇ ಸೂಕ್ತ ಎಂದು, ಹೊರಗಿನ ಹಸಿಮಣ್ಣ ಪರಿಮಳಕ್ಕೆ ಒಳಗಿನ ಬಿಸಿ ಕಾಫಿಯ ಸುವಾಸನೆಯ ಸ್ಪರ್ಧೆಯೊಡ್ಡುತ್ತಾ ಪೆನ್ನು ಹಿಡಿದಿದ್ದಾಗಿದೆ.

ಮಲೆನಾಡಿನ ಮಳೆ ಒಂದು ಬಾರಿ ಹಿಡಿದರೆ ಮುಗಿಯಿತು. ಸಣ್ಣ ಮಳೆ ಆದ ಮೇಲೆ ದೊಡ್ಡ ಮಳೆ ಬಿಟ್ಟರೆ ಇನ್ನೂ ದೊಡ್ಡ ಮಳೆ! ಹೊರತಾಗಿ ಹನಿ ಕಡಿಯುವ ಮಾತೇ ಇಲ್ಲ. ಬಯಲುಸೀಮೆಗಳಲ್ಲಿನ ಝಳಾಝಳಾ ಬಿಸಿಲಿನಂತೆಯೇ ಮಲೆನಾಡಿನ ರಪರಪ ಮಳೆ. ಬೆಳಗ್ಗೆ ಎಂಟು ಗಂಟೆಯಾದರೂ ಹೊರಗೆಲ್ಲ ಇನ್ನೂ ಕತ್ತಲೆ, ಇದೇ ಹೊತ್ತಿಗೆ ಶುರುವಾಗುವ ಶಾಲೆ.